**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಸಿ. ಸಿ. ನಂಬರಃ 275/2024</u>**

**ಫಿರ್ಯಾದುದಾರರು:**

ಶ್ರೀ. ನಾಗರಾಜ ತಂದೆ ಪರಸಪ್ಪ ಅಂಟಾಳ,
ಶ್ರೀ ರೇಣುಕಾದೇವಿ ಪೈನಾನ್ಸ, ಮುಂಡಗೋಡ.

**– ವಿರುದ್ಧ –**

**ಆರೋಪಿತರು:**

ಶ್ರೀ. ಮುಸ್ತಾಕ ತಂದೆ ಇಮಾಮಸಾಬ ಯಲ್ಲಾಪುರ,
ಪ್ರಾಯಃ 36 ವರ್ಷ, ವೃತ್ತಿಃ ವ್ಯಾಪಾರಿ,
ಸಾಃ ಇಂದಿರಾ ನಗರ, ಮುಂಡಗೋಡ.

**<u>ಆಪಾದನೆ</u>**

ಆರೋಪಿತರಾದ ನೀವು ಪಿರ್ಯಾದಿಯವರ ಶ್ರೀ ರೇಣುಕಾದೇವಿ ಎಂಬ ಪೈನಾನ್ಸ ನಿಂದ ಹಣಕಾಸಿನ ಅಡಚಣೆಯ ಸಲುವಾಗಿ ವೈಯಕ್ತಿಕ ಸಾಲವನ್ನು ದಿನಾಂಕಃ 20-09-2022 ರಂದು ರೂ.2,00,000-00 ಗಳನ್ನು ಪಡೆದಿರುತ್ತೀರಿ, ಅಲ್ಲದೆ ಸಂಘದ ನೀತಿ ನಿಯಮಾವಳಿಗಳ ಪ್ರಕಾರ ಜಾಮೀನು ಭದ್ರತೆಯನ್ನು ನೀಡಿದ್ದಲ್ಲದೇ, ಕರಾರು ಒಡಂಬಡಿಕೆಯನ್ನು ಸಂಘಕ್ಕೆ ಬರೆದುಕೊಟ್ಟಿರುತ್ತೀರಿ. ತದನಂತರ ಸದರಿ ಸಾಲದ ಮರುಪಾವತಿ ಮಾಡುವ ಅವಧಿ ಮೂಗಿದರೂ ಕೂಡ ತಾವು ನಿಗಧಿತ ಸಮಯಕ್ಕೆ ಸಾಲವನ್ನು ಮರು ಪಾವತಿ ಮಾಡದೇ, ಕಾಲಹರಣವನ್ನು ಮಾಡಿ ಸಮಯವನ್ನು ದೂರುತ್ತಾ ಬಂದಿರುತ್ತೀರಿ, ಕೊನೆಗೆ ನೀವು ಪಡೆದ ಸಾಲವನ್ನು ಮರು ಪಾವತಿ ಮಾಡಲು ಪಿರ್ಯಾದಿ ಸಂಘದವರು ನಿಮ್ಮನ್ನು ಅನೇಕ ಬಾರಿ ಖುದ್ದಾಗಿಯೂ ಹಾಗೂ ಮೊಬೈಲ ಮೂಲಕ ಸಂಪರ್ಕಿಸಿ ಹಣ ಮರುಸಂದಾಯ ಮಾಡಲು ಕೇಳಿಕೊಂಡಾಗ, ಸದರಿ ಸಾಲವನ್ನು ಮರುಪಾವತಿ ಮಾಡುವುದಾಗಿ ಒಪ್ಪಿ ಕೆನರಾ ಬ್ಯಾಂಕ, ಮುಂಡಗೋಡ ಶಾಖೆಯಲ್ಲಿ ನೀವು ಹೊಂದಿರುವ ಖಾತೆಯ ಚೆಕ್ ನಂ.899348 ಒಟ್ಟು ರೂ.2,00,000/- ಮೊತ್ತಕ್ಕೆ ದಿನಾಂಕಃ 11-03-2024 ಚೆಕ್ಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸಂಘವು ಸದರಿ ದಿನಾಂಕ ದಂದು ಸದರಿ ಬ್ಯಾಂಕಿಗೆ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣ" ಇರುವುದಿಲ್ಲವೆಂತ ದಿನಾಂಕ 14-03-2024 ರಂದು ಮೇಮೋದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 26-03-2024 ರಂದು ತಮ್ಮ ವಕೀಲರ ಮೂಲಕ ನೋಟಸ್‌ನ್ನು ನಿಮಗೆ ನೀಡಿದ್ದರೂ ಸಹ ನೀವು ಚಕ್ಕನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೆಬಲ್ ಇನ್ ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಷದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 05-08-2025

ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳು,
ಮುಂಡಗೋಡ